**<u>ಸಾಕ್ಷಿಯನ್ನು ದಿನಾಂಕ 27.10.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಟಿ ಎನ್ ಎಸ್ ವಕೀಲರಿಂದಃ</u>**

ನನಗೆ ಅರ್ಜಿದಾರರು ಮತ್ತು ಎದುರುದಾರರು ಸಂಬಂಧಿಕರು. ನಾನು ಅರ್ಜಿದಾರರ ಎದುರು ಮನೆಯಲ್ಲಿದ್ದು ಅವರು ಗಲಾಟೆ ಮಾಡಿಕೊಂಡ ಸಮಯದಲ್ಲಿ ಪಂಚಾಯ್ತಿ ಮಾಡಲು ಹೋಗಿದೆ. ಪಂಚಾಯ್ತಿ ಮಾಡಲು ಎರಡು ಮೂರು ಬಾರಿ ಹೋಗಿದ್ದೆ. ಮದುವೆಯಾದ 10 ವರ್ಷಗಳ ನಂತರ ನಾನು ಅಲ್ಲಿಗೆ ಬಂದಿದ್ದು ನಂತರ ಅವರ ನಡುವೆ ಗಲಾಟೆಯಾಗುತ್ತಿದ್ದ ವಿಚಾರ ನನಗೆ ಗೊತ್ತಾಯಿತು. 10 ವರ್ಷಗಳ ನಂತರ ಎರಡು ಮೂರು ಬಾರಿ ಗಲಾಟೆಯಾಗಿತ್ತು. 2022 ರಲ್ಲಿ ಕೊನೆಯ ಬಾರಿ ಗಲಾಟೆಯಾಗಿತ್ತು. ಗಲಾಟೆ ಬಿಡಿಸಲು ಏಳೆಂಟು ಜನ ಹೋಗಿದ್ದೇವು. ನಾನು ಹಾಗೂ ಎದುರುದಾರಳು, ತಾಯಿ, ತಂಗಿ ಹೊಡೆಯಲು ಹೋಗಿದ್ದೇವು ಎಂದು ಎಫ್ ಐ ಆರ್ ಆಗಿತ್ತು ಎಂದರೆ ಸಾಕ್ಷಿ ನನ್ನ ಮೇಲೆ ಆಗಿರಲಿಲ್ಲ. ಸಿಸಿ 326/2023 ರಲ್ಲಿ ನಾನು ಎದುರುದಾರಳ ಪರ ಸಾಕ್ಷಿದಾರನಾಗಿದ್ದೇನೆ ಎಂದರೆ ಸರಿ. ಅವರ ಮನೆಯಲ್ಲಿ ಹಬ್ಬಗಳಿದ್ದ ಸಮಯದಲ್ಲಿ ಹೋಗಿರುತ್ತೇವೆ. ಅರ್ಜಿದಾರರು ಮತ್ತು ಎದುರುದಾರರು ಇಬ್ಬರು ಕರೆದಿದ್ದರು. ಎರಡು ಮೂರು ಬಾರಿ ಊಟಕ್ಕೆ ಹೋಗಿದ್ದೇನೆ. ಮದುವೆಯಾದ ನಂತರ ಅನೋನ್ಯವಾಗಿದ್ದರು ಮದ್ಯೆ ವುಧ್ಯೆ ಗಲಾಟಯಾಗುತ್ತಿತು. ಹಣ ಮತ್ತು ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಗಲಾಟೆಯಾಗುತ್ತಿತ್ತು. ಮದುವೆಯಾದ 10 ವರ್ಷಗಳ ನಂತರ ಆ ರೀತಿ ಹಣ ತೆಗೆದುಕೊಂಡು ಬಾ ಎಂದು ಗಲಾಟೆ ಮಾಡಿದ್ದರು. ಅದಕ್ಕೂ ಮೊದಲು ಹಣ ತೆಗೆದುಕೊಂಡು ಬಾ ಎಂದು ಎದುರುದಾರರು ಹೇಳುತ್ತಿದ್ದರು. ನನ್ನ ಮುಂದೆ ಮದುವೆಯಾದ 10 ವರ್ಷಗಳ ನಂತರ ಕೇಳಿದ್ದರು ದಿನಾಂಕ ನೆನಪಿಲ್ಲ. ಪೆಬ್ರುವರಿ 2022 ರಲ್ಲಿ ಆ ರೀತಿ ಕೇಳದ್ದರು. ಗಲಾಟೆಗೆ ಮೊದಲು ಕೇಳಿದ್ದರಂತೆ. ನಾನು ಗಲಾಟೆ ಬಿಡಿಸಲು ಹೋದಾಗ ಕೇಳಿದ್ದರು. 10 ಜನ ಗಲಾಟೆ ಬಿಡಿಸಲು ಹೋಗಿದ್ದೇವು. ಕೃಷ್ಣಪ್ಪ, ಗಂಗಾಧರ ಇತರರ ಬಂದಿದ್ದರು. ಅವರೆಲ್ಲಾ ಮಂಜುನಾಥನನ್ನು ಹೊಡೆದಿದ್ದು ನಂತರ ನಮ್ಮ ಮೇಲೆ ಕೇಸ ಆಗಿತ್ತು ಎಂದರೆ ಸರಿಯಲ್ಲ.

ಅಮರನಾಥ ಪ್ರತಿವಾದಿಯ ತಮ್ಮ ಎಂದರೆ ಸರಿ. ಅವರು ಡಿಎಸ್ ಎಸ್ ಲೀಡರ್ ಎಂದರೆ ಗೊತ್ತಿಲ್ಲ ಆದರೆ ಅವರು ಯಾವುದೋ ಪಕ್ಷದಲ್ಲಿದ್ದಾರೆ. ನಾವೆಲ್ಲಾ ಸ್ನೇಹಿತರು ಅರ್ಜಿದಾರರಿಗೆ ಹೊಡೆದ್ದವು ಎಂದರೆ ಸರಿಯಲ್ಲ. ನಾವು ಅವರ ಮನೆಗೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ನಿರ್ಮಲಾ ಅವರ ಹೆಸರ ಮೇಲೆ ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಪಂಚಾಯ್ತಿ ಮಾಡಲು ನಾನು ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಅವರ ನಿವಾಸಕ್ಕೆ 2022 ರಲ್ಲಿ ಹೋಗಿದ್ದೆ. ಗಲಾಟೆಯಾದ ನಂತರ ಹೋಗಿದ್ದೆ. ಅಷ್ಟರಲ್ಲಿ ಕೇಸು ನಮ್ಮ ಮೇಲೆ ದಾಖಲಾಗಿತ್ತಾ ಎಂದರೆ ಸಾಕ್ಷಿಯು ನಮ್ಮ ಮೇಲೆ ದಾಖಲಾಗಿಲ್ಲ ಎಂದು ನುಡಿಯುತ್ತಾರೆ. ಗಲಾಟೆಯಾದ ತಕ್ಷಣವೇ ಹೋಗಿದ್ದೆ. ಮಂಜುನಾಥರವರು ಎಷ್ಟು ದಿನ ಆಸ್ಪತ್ರೆಯಲ್ಲಿದ್ದರು ನನಗೆ ಗೊತ್ತಿಲ್ಲ. ನಾವು ಹೊಡೆದ್ದಿರಿಂದ 3 ಬಾರಿ ಶಸ್ತ್ರ ಚಿಕಿತ್ಸೆ ಆಗಿದೆ ಎಂದರೆ ಸಾಕ್ಷಿಯು ನಾನು ಹೊಡೆದಿಲ್ಲ.

ನಿರ್ಮಲ ಅವರು ಡಿಸಿ ಮತ್ತು ತಹಶೀಲ್ದಾರ್ ರ ಕೇಸ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ಯಜಮಾನರು ಬೇಕು ಎಂದು ಹಾಕಿರುವ ಕೇಸು ಮಾತ್ರ ನನಗೆ ಗೊತ್ತಿದೆ. ಮಂಜನಾಥ ರವರ ತಾಯಿಯವರು ಸಹ ಗಲಾಟೆ ಮಾಡಿದ್ದಾರೆ. ಮಂಜುನಾಥ ರವರು ಮೊದಲು ಶಿರಸ್ತೇದಾರರಾಗಿದ್ದರು ಇವಾಗ ತಹಶೀಲ್ದಾರ ಆಗಿರಬಹುದು. ಅವರು ಯಾವ ಊರಿನಲ್ಲಿ ಕೆಲಸ ಮಾಡುತ್ತಿದ್ದಾರೆ ಗೊತ್ತಿಲ್ಲ. ಎಷ್ಟು ಗಂಟೆಗೆ ಮನೆಗೆ ವಾಪಸ್ಸು ಬರುತ್ತಿದ್ದರೂ ಗೊತ್ತಿಲ್ಲ. ಆದರೆ ತಡವಾಗಿ ಬರುತ್ತಿದ್ದರು. ಅವರಿಗೆ ಜಾಸ್ತಿ ಕೆಲಸ ಇದ್ದರಿಂದ ತಡವಾಗಿ ಬರುತ್ತಿದ್ದರು ಎಂದರೆ ಇರಬಹುದು. ತಡವಾಗಿ ಬರುತ್ತಿದ್ದ ಕಾರಣ ಅನೈತಿಕ ಸಂಬಂಧವನ್ನು ಎದುರುದಾರರು ಕಟ್ಟುತ್ತಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಎದುರುದಾರಳು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಎದುರುದಾರಳ ಮಕ್ಕಳು ತಂದೆಯ ಜೊತೆ ವಾಸವಿದ್ದಾರೆ. ಹೆಣ್ಣು ಮಗಳು ರಾಯಲ್ ಶಾಲೆಯಲ್ಲಿ ಎಸ್ ಎಸ್ ಎಲ್ ಸಿ ಮಾಡುತ್ತಿದ್ದು ನನ್ನ ಮಗಳು ಅಲ್ಲಿಯೇ ಓದುತ್ತಿದ್ದಾಳೆ. ಮಗ ಎಲ್ ಎಲ್ ಬಿ ಮಾಡುತ್ತಿದ್ದಾನೆ ಎಂದು ತಿಳಿದುಕೊಂಡಿದ್ದೇನೆ. ಅವರ ವಿದ್ಯಾಭ್ಯಾಸ ಖರ್ಚು ಯಾರು ನೋಡಿಕೊಳುತ್ತಿದ್ದಾರೆ ಗೊತ್ತಿಲ್ಲ. ಎದುರುದಾರರು

ವಿಚ್ಛೇದನ ಕೊಡದೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಹೇಳಿಕೊಟ್ಟಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚಾಯ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಎದುರುದಾರಳು ಕಿರುಕುಳ ಕೊಟ್ಟಿದ್ದಾಳೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.